ಸಿ. ಸಿ. ನಂ.- 286/24

ಸಿ.ಡಬ್ಲ್ಯೂ.- 9 / ಪಿ.ಡಬ್ಲ್ಯೂ.- 5

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 06-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಸುನೀಲ್ ಬಾಬುನ್ ಪಾರಸಿ |
| ತಂದೆಯ ಹೆಸರು - | ಬುಬನ್ ಶಂಕರ್ ಪಾರಸಿ |
| ವಯಸ್ಸು - | 28 ವರ್ಷಗಳು |
| ಉದ್ಯೋಗ - | ನಿರುದ್ಯೋಗಿ |
| ವಾಸಸ್ಥಳ - | ಪಾಟೀಲೋವಸ್ತಿ ಗ್ರಾಮ. ಸೊಲ್ಲಾಪುರ |

(ಸಾಕ್ಷಿಗೆ ಹಿಂದಿ ಭಾಷೆ ಮಾತ್ರ ಗೊತ್ತಿರುವುದರಿಂದ, ನ್ಯಾಯಾಲಯದಲ್ಲಿಯೇ ಹಾಜರಿದ್ದ ಹಿಂದಿ ಭಾಷೆ ಗೊತ್ತಿರುವ ಶ್ರೀ ಯು.ಜಿ.ವಕೀಲರನ್ನು ತರ್ಜುಮೆಗಾರರನ್ನಾಗಿ ನೇಮಕ ಮಾಡಿ, ಅವರ ಸಹಾಯದಿಂದ ಸಾಕ್ಷಿ ಹಿಂದಿ ಭಾಷೆಯಲ್ಲಿ ನುಡಿದ ಸಾಕ್ಷ್ಯವನ್ನು ಕನ್ನಡ ಭಾಷೆಗೆ ಅನುವಾದಿಸಲಾಯಿತು)

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಆರೋಪಿ ನಮ್ಮ ಊರಿನವರಾಗಿರುತ್ತಾರೆ. ಚಾಸಾ.1 ಹಾಗೂ ಮೃತ ಅಶ್ವಿನ್ ಕುಮಾರರವರ ಪರಿಚಯ ನನಗೆ ಇಲ್ಲ. ನಾನು ಹೊಸಪೇಟೆಯಿಂದ ಹಂಪೆಗೆ ನಿಧಾನವಾಗಿ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ ಬಲಗಡೆಯಿಂದ ಮೃತ ಅಶ್ವಿನ್ ಕುಮಾರ್ ರವರು ತಮ್ಮ ಮೋಟಾರ್ ಸೈಕಲ್ ನ್ನು ಚಲಾಯಿಸಿಕೊಂಡು ಬಂದು ನನ್ನ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ. ಪರಿಣಾಮವಾಗಿ ನಾವಿಬ್ಬರೂ ಕೆಳಗೆ ಬಿದ್ದೇವು. ಮೃತ ಅಶ್ವೀನ್ ಕುಮಾರ್ ರವರಿಗೆ ಎಲ್ಲಿ ಗಾಯ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳದಲ್ಲಿಎಚ್ಚರ ತಪ್ಪಿ ಬಿದ್ದಿದ್ದೆ. ನಂತರ ಆಸ್ಪತ್ರೆಯಲ್ಲಿಯೇ ನನಗೆ ಜ್ಞಾನ ಬಂದಿತ್ತು. ನನ್ನ ಬಲ ಹಣೆ, ಬಲ ಮುಂಗೈ ಹಾಗೂ ಬಲಗಾಲಿಗೆ ಪೆಟ್ಟು ಬಿದ್ದಿತ್ತು. ಆರೋಪಿಗೆ ಸಹ ಈ ಅಪಘಾತದಿಂದ ಗಾಯವಾಗಿತ್ತು. ನಾನು ಹಾಗೂ ಆರೋಪಿ ಒಂದೇ ವಾಹನದಲ್ಲಿ ಬರುತ್ತಿದ್ದೇವು. ಇದರ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಈ ಅಪಘಾತ ಮೃತ ಅಶ್ವಿನ್ ಕುಮಾರ್ ರವರ ತಪ್ಪಿನಿಂದ ಆಗಿರುತ್ತದೆ. ನಾವು ನಿಧಾನವಾಗಿ ವಾಹನ ಚಲಾಯಿಸುತ್ತಿದ್ದೇವು. ಮೃತನು ಏಕಾಏಕಿ ತನ್ನ ಮೋಟಾರ್ ಸೈಕಲ್ ನಿಂದ ನಮಗೆ ಡಿಕ್ಕಿ ಪಡಿಸಿರುತ್ತಾನೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ

ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿನಾಂಕ 27.12.2023 ರಂದು ನಾನು ಮತ್ತು ಆರೋಪಿ ಮೋಟಾರ್ ಸೈಕಲ್ ಸಂ.ಎಂ ಹೆಚ್-45-ಎಕೆ-2474 ನೇದ್ದರಲ್ಲಿ ಬರುತ್ತಿದ್ದೇವು ಎಂದರೆ ಸಾಕ್ಷಿ ನನಗೆ ವಾಹನ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ವಾಹನವನ್ನು ವೇಗವಾಗಿ ಚಲಾಯಿಸುತ್ತಿದ್ದರಿಂದ ನಾನು ನಿಧಾನವಾಗಿ ವಾಹನವನ್ನು ಚಲಾಯಿಸು ಎಂದು ಅವರಿಗೆ ಹೇಳಿದ್ದೆ ಎಂದರೆ ಸಾಕ್ಷಿಯು ನಮ್ಮ ವಾಹನವನ್ನು ಆರೋಪಿ ನಿಧಾನವಾಗಿಯೇ ಚಲಾಯಿಸುತ್ತಿದ್ದ ಎಂದು ನುಡಿಯುತ್ತಾರೆ. ಅದೇ ದಿನ ರಾತ್ರಿ 7.10 ಗಂಟೆಗೆ ಅನಂತಶಯನ ಗುಡಿ ಶ್ರೀಕರಿ ಕಾಲೇಜು ಕ್ರಾಸ್ ಹತ್ತಿರ ಹಂಪಿ ಮಾರ್ಗವಾಗಿ ಆರೋಪಿ ತನ್ನ ಮೋಟಾರ್ ಸೈಕಲ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನಮ್ಮ ಮುಂದೆ ಇದ್ದ ಶ್ರೀಕರಿ ಕಾಲೇಜು ರಸ್ತೆ ಕಡೆ ಹೋಗುತ್ತಿದ್ದ ಒಂದು ಮೋಟಾರ ಸೈಕಲ್ ಗೆ ಡಿಕ್ಕಿ ಪಡಿಸಿ, ಅಪಘಾತ ಪಡಿಸಿದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರೇ ನಮ್ಮ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿ ಚಲಾಯಿಸುತ್ತಿದ್ದ ವಾಹನದ ನೋಂದಣಿ ಸಂ.ಕೆಎ-35-ಇಬಿ 8689 ಎಂದರೆ ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಗೆ ತೀವ್ರ ರಕ್ತಗಾಯವಾಗಿದ್ದು ಬಲಕಿವಿಯಿಂದ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಅವರ ಹೆಸರು ವಿಚಾರಿಸಿದಾಗ ಅಶ್ವೀನ್ ಕುಮಾರ್ ಎಂದು ತಿಳಿಯಿತು ಎಂದರೆ ನನಗೆ ಗೊತ್ತಿಲ್ಲ. ಅವರ ಹಿಂದೆ ಕೂತಿದ್ದ ವ್ಯಕ್ತಿಯ ಹೆಸರು ಚನ್ನವೀರಪ್ಪ ಎಂದು ತಿಳಿಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಾಸಾ.1 ರವರಿಗೂ ಸಹ ಗಾಯಗಳಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಶ್ವೀನ್ ಕುಮಾರ್ ರವರು ಚಿಕಿತ್ಸೆ ಫಲಕಾರಿಯಾಗದೇ ವಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಈ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.